ಪ್ರತಿಕ್ರಿಯಿಸುವ ಭೀಷ್ಮನು 'ಕರ್ಣಾ, ನಿನ್ನಲ್ಲಿರುವಷ್ಟು ಕಲಿತನ, ಯೌವನ, ದೈವಕೃಪೆ, ಶೌರ್ಯ ಇತ್ಯಾದಿಗಳು ನನ್ನಲ್ಲಿ ಇಲ್ಲಪ್ಪಾ, ಆದರೆ ಇದು ಕುರುಕ್ಷೇತ್ರ ಯುದ್ಧ, ನಾವು ಇದಿರಿಸಬೇಕಾದ್ದು ಕೃಷ್ಣನನ್ನು, ಆದುದರಿಂದ ಅವಸರ ಬೇಡ, ನಿನಗೂ ಒಂದು ಅವಕಾಶ ಬರುತ್ತದೆ' ಎಂದು ಹೇಳಿ ತನ್ನ ಔನ್ನತ್ಯವನ್ನು ಮೆರೆಯುತ್ತಾನೆ. ಇದನ್ನು ಸ್ವಲ್ಪ ತಡವಾಗಿ ಅರ್ಥಮಾಡಿಕೊಂಡ ಕರ್ಣನು ಮುಂದೆ ಭೀಷ್ಮರು ಶರಶಯ್ಯೆಯಲ್ಲಿದ್ದಾಗ ಅವರಿಗೆ ಭಕ್ತಿಯಿಂದ ಮೂರು ಸುತ್ತು ಬಂದು ಅವರ ಕಾಲುಗಳನ್ನು ತನ್ನ ತಲೆಯ ಮೇಲಿರಿಸಿಕೊಂಡು 'ನಿಮ್ಮನ್ನು ತಿಳಿಯದೆ ನೋಯಿಸಿದೆ, ಕ್ಷಮಿಸಿ' ಎಂದು ಬೇಡಿಕೊಂಡು ತನ್ನ ಉನ್ನತಿಕೆಯನ್ನೂ ಮೆರೆಯುತ್ತಾನೆ.

ಭೀಷ್ಮ ಮತ್ತು ಕರ್ಣರನ್ನು ಹೀಗೆ ಮುಖಾಮುಖಿಯಾಗಿಸಿ ಎತ್ತರಿಸುವ ಪಂಪನು, ದ್ರೋಣ, ಕೃಪ ಮತ್ತು ಅಶ್ವತ್ಥಾಮರು ಕರ್ಣನನ್ನು ಕಂಡಾಗ ಬೇರೆಯದೇ ಹಾದಿ ಹಿಡಿಯುತ್ತಾನೆ. 'ಮಾನವ ಜಾತಿ ಒಂದೆ ವಲಂ' ಎಂದು ಆದಿಪುರಾಣದಲ್ಲಿ ಘೋಷಿಸಿದ ಪಂಪನು ಇದನ್ನು ಬ್ರಾಹ್ಮಣ ಮತ್ತು ಶೂದ್ರರ ಸಂಘರ್ಷವಾಗಿ ಗ್ರಹಿಸುತ್ತಾನೆ. ಹಾಗಾಗಿ ಇಲ್ಲಿ ಕುಲ, ಜಾತಿ ಇತ್ಯಾದಿಗಳೆಲ್ಲವೂ ಮುನ್ನೆಲೆಗೆ ಬರುತ್ತವೆ. ಜಾತಿ ಕುಲಗಳ ಪ್ರಶ್ನೆ ಬಂದಾಗ ಕರ್ಣ ಬಹಳ ಬೇಗ ತಾಳ್ಮೆ ಕಳೆದುಕೊಳ್ಳುತ್ತಾನೆ, ಮತ್ತು ಇದಿರಿಗೆ ಯಾರಿದ್ದರೂ ಸರಿ, ಅವರ ಮೇಲೆ ಹರಿ ಹಾಯುತ್ತಾನೆ. ಇದಕ್ಕೆ ಒಳ್ಳೆಯ ಉದಾಹರಣೆ ಪಂಪಭಾರತದ 10ನೇ ಆಶ್ವಾಸದಲ್ಲಿ ಬರುವ ಕೆಲವು ಘಟನೆಗಳು. ಭೀಷ್ಮನ ಪಟ್ಟಾಭಿಷೇಕಕ್ಕೆ ಕರ್ಣ ತಕರಾರು ಎತ್ತಿದಾಗ, ಅಲ್ಲಿ ಉಪಸ್ಥಿತರಿದ್ದ ದ್ರೋಣಾಚಾರ್ಯರು ಅಲ್ಲಿ ನಡೆಯುತ್ತಿದ್ದ ವೀರತ್ವದ ಪ್ರಶ್ನೆಯನ್ನು ಕುಲದ ಪ್ರಶ್ನೆಯಾಗಿ ಪರಿವರ್ತಿಸಿ 'ಭುಜಬಲಯುತರಂ ಹಿತರನ್ ಈ ಸಭಾಮಧ್ಯದೊಳ್ ಕೊಬ್ಬಿನಿಂದ ಹೀಗೆ ತಿರಸ್ಕರಿಸಿ ಮಾತಾಡುವುದೇ? ನಾಲಗೆಯು ಕುಲವನ್ನು ಆಡಿ ತೋರಿಸುತ್ತದೇ ಅಲ್ಲವೇ?' (ನಾಲಗೆ ಕುಲಮಂ ತುಬ್ಬುವವೋಲ್) ಎಂದುಬಿಡುತ್ತಾರೆ. ಇದರಿಂದ ತೀವ್ರವಾಗಿ ಗಾಸಿಗೊಂಡ ಕರ್ಣನು, ಕೋಪದಿಂದ ಕುಲದ ಪ್ರಶ್ನೆಯನ್ನೇ ತಿರಸ್ಕರಿಸುವ ಮಾತುಗಳನ್ನಾಡುತ್ತಾನೆ

ಕುಲಮನೆಮುನ್ನ ಮುಗ್ಗಡಿಪರೇಂಗಳ ನಿಮ್ಮ ಕುಲಂಗಳಾಂತು ಮಾ
ರ್ಮಲೆವನಟ್ಟಿತಿಂಬುವೆ ಕುಲಂ ಕುಲಮಲ್ತು ಚಲಂಕುಲಂಗುಣಂ
ಕುಲಮಭಿಮಾನಮೊಂದೆಕುಲಮಣ್ಮುಕುಲಂಬಗೆವಾಗಳೀಗಳೀ
ಕಲಹದೊಳಣ್ಣನಿಮ್ಮಕುಲವಾಕುಲಮಂನಿಮಗುಂಟು ಮಾಡುಗುಂ

(ಮಾತಿಗೂ ಮುನ್ನ ಕುಲದ ಪ್ರಶ್ನೆಯನ್ನು ಯಾಕೆ ಎತ್ತುತ್ತಿದ್ದೀರಿ? ಪ್ರತಿಭಟಿಸುವವರನ್ನು ನಿಮ್ಮ ಕುಲ ತಿಂದು ಹಾಕುತ್ತದೆಯೇ? ಕುಲ ಹುಟ್ಟಿನಿಂದ ಬರುವುದಿಲ್ಲ, ಅದು ಛಲ, ಗುಣ, ಅಭಿಮಾನ, ಆತ್ಮ ಗೌರವ, ಪರಾಕ್ರಮ ಇತ್ಯಾದಿಗಳಿಂದ ಬರುತ್ತದೆ. ಈ ಯುದ್ಧದಲ್ಲಿ ನಿಮ್ಮ ಕುಲವೇ ನಿಮಗೆ ವ್ಯಥೆಯನ್ನುಂಟು ಮಾಡಲಿದೆ).

ಕುರುಕ್ಷೇತ್ರ ಯುದ್ಧದ 15ನೇ ದಿವಸ ಭೀಕರವಾಗಿ ಯುದ್ಧ ಮಾಡುತ್ತಿದ್ದ ದ್ರೋಣನು ಮಗನಾದ ಅಶ್ವತ್ಥಾಮನ ಮರಣವಾರ್ತೆಯನ್ನು ತಪ್ಪಾಗಿ ತಿಳಿದು ಯುದ್ಧವನ್ನು ನಿಲ್ಲಿಸಿದಾಗ ಕರ್ಣನ ಮಾತು ನಿಜವೂ ಆಗಿಬಿಡುತ್ತದೆ.

ಪಂಪನು ಕುಲದ ಪ್ರಶ್ನೆಯನ್ನು ಕುರುಕ್ಷೇತ್ರ ಯುದ್ಧದ ಅಂತ್ಯದವರೆಗೂ ಕೊಂಡೊಯ್ಯುತ್ತಾನೆ. ದ್ರೋಣ ಸತ್ತಾಗ ಅಶ್ವತ್ಥಾಮನಿಗೆ ಪಟ್ಟಗಟ್ಟಲು ಕೃಪನು ದುರ್ಯೋಧನನನ್ನು ಒತ್ತಾಯಿಸುವಾಗ ದುರ್ಯೋಧನನು 'ಕಲಶಜನಿಂ ಬಳಿಕ್ಕೆ ಕರ್ಣಂಗೆ' ಎನ್ನುತ್ತಾನೆ. ಕರ್ಣನ ಹೆಸರು ಕೇಳುತ್ತಲೇ ಉರಿದು ಬಿದ್ದ ಅಶ್ವತ್ಥಾಮನು 'ನಿಜದಿಂ ಭೂಪರೆಂಬುವರ್ ಅವಿವೇಕಿಗಳ್, ಸೂತಜನು ಅರ್ಜುನನ್ನು ಇರಿಯುವುದುಂಟೇ? ಅಂಬಿಗನೊಳಾದುದಿದು ಋಣ ಸಂಬಂಧಂ' ಎಂದು ವ್ಯಂಗ್ಯವಾಡುತ್ತಾನೆ. ಸೂತಪುತ್ರ ಪದ ಕಿವಿಗೆ ಬೀಳುತ್ತಲೇ ಹೆಡೆ ಎತ್ತಿದ ಸರ್ಪದಂತೆ ಫೂತ್ಕರಿಸಿದ ಕರ್ಣನು 'ಎಷ್ಟು ಶಕ್ತಿಯಿದ್ದರೂ ಬ್ರಾಹ್ಮಣನ ಪೌರುಷಕ್ಕೆ ಹೆದರುವವರು ಇದ್ದಾರೆಯೇ? ನೀರೊಳ್ಳೆಗೆ ವಿಷ ಉಂಟು ಎಂದರೂ ಅದು ನೀರೊಳ್ಳೆಯೇ, ಅದು ಬಿಟ್ಟು ನೀರೊಳ್ಳೆ ನಾಗರ ಹಾವಾಗುವುದುಂಟೇ? ಯಾವುದೋ ನೆಪದಿಂದ ಆಯುಧವನ್ನು ಎಸೆದು ಸತ್ತವರ ಉದಾಹರಣೆ ನಮ್ಮ ಮುಂದಿಲ್ಲವೇ?' ಎಂದು ಅಶ್ವತ್ಥಾಮನನ್ನು ಅಣಕಿಸುತ್ತಾನೆ. ಕೌರವ ಇಬ್ಬರನ್ನೂ ಹೇಗೋ ಸಮಾಧಾನಿಸುತ್ತಾನೆ. ಶಲ್ಯ ಸಾರಥ್ಯ ಸಂದರ್ಭದಲ್ಲಿಯೂ ಮತ್ತೆ ಕುಲದ ವಿಷಯ ಮುನ್ನೆಲೆಗೆ